ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಅಚ್ಚುಕಟ್ಟು ಪ್ರದೇಶದ ಕುರಿತು

ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

1262 (1522) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೇಮಾವತಿ ಜಲಾಶಯದಿಂದ ನಾಗಮಂಗಲ ತಾಲ್ಲೂಕಿಗೆ ನೀರಾವರಿ ಸೌಲಭ್ಯಗಳು ಮಂಜೂರಾಗಿರುವುದು ಯಾವಾಗ ; ಕಾರ್ಯಾರಂಭವಾಗಿದ್ದು ಯಾವಾಗ;

(ಆ) ನಾಗಮಂಗಲ ತಾಲ್ಲೂಕಿಗೆ ಎಷ್ಟು ಅಚ್ಚುಕಟ್ಟು ಪ್ರದೇಶವನ್ನು ಮಂಜೂರು ಮಾಡಲಾಗಿತ್ತು ; ಈ ಪೈಕಿ ಇದುವರೆಗೂ ಎಷ್ಟು ಪ್ರದೇಶವನ್ನು ಅಭಿವೃದ್ಧಿ ಮಾಡಲಾಗಿದೆ ;

(ಇ) ಯೋಜನೆ ಮಂಜೂರಾದಾಗ ಎಷ್ಟು ಕಾಲಮಿತಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ನಿಗದಿಯಾಗಿತ್ತು;

(ಈ) ಅಚ್ಚುಕಟ್ಟು ಪ್ರದೇಶದ ಎಷ್ಟು ಭಾಗ ಕೆರೆಯ ಅಚ್ಚುಕಟ್ಟಿಗೆ ಸೇರುತ್ತದೆ; ಹೊಸ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣವೆಷ್ಟು ;

(ಉ) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು (ಕಾರ್ಯಗತ ಮಾಡಲು) ಸರ್ಕಾರದ ಅನುದಾನ ಸಕಾಲಿಕವಾಗಿ ದೊರಕಿದೆಯೇ ;

(ಊ) ಯೋಜನೆಯನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆ ಹಾಗೂ ಕಾಲಮಿತಿ ಎಷ್ಟು ಹಿಡಿಯುತ್ತದೆ ;

(ಋ) ಎಷ್ಟು ಕಾಲಮಿತಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರ ತೀರ್ಮಾನಿಸಿದೆ ;

(ಎ) ಅಚ್ಚುಕಟ್ಟು ಕೆರೆಗಳ ಹೂಳು ತೆಗೆಯುವ ಮತ್ತು ಒತ್ತುವರಿಯನ್ನು ತೆರವುಗೊಳಿಸುವ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡಿದೆಯೇ;

(ಏ) ಇದುವರೆಗೆ ಆಗಿರುವ ಕಾಮಗಾರಿಗಳು ದೊಷಪೂರಿತವಾಗಿವೆ ಎಂಬ ದೂರುಗಳನ್ನು ರೈತರು ಪದೇ ಪದೇ ಅಧಿಕಾರಿಗಳ ಗಮನಕ್ಕೆ ತಂದಿರುವುದು ನಿಜವೇ ; ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯಾವ ವಿಧವಾದ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ?